ಸ್ಮರಣೆಯಲ್ಲಿ ಅಮೃತಶಿಲೆಯ ಶಿವಲಿಂಗಗಳನ್ನು ಪ್ರತಿಷ್ಠಾಪಿಸಲಾಗಿದೆ. ಇಲ್ಲಿರುವ ಫಲಕದ ಮೇಲಿನ ವಿವರ ಹೀಗಿದೆ...

ನಂದಿಸಹಿತ ಶ್ರೀ ವೀರೇಶ್ವರ ಲಿಂಗ – ಹಾಲೇರಿ ವಂಶದ ಕೊನೆಯ ರಾಜ ಚಿಕ್ಕವೀರ ರಾಜೇಂದ್ರ ವಾಡಿಯರ್; ಶ್ರೀ ಗಂಗೇಶ್ವರ ಲಿಂಗ – ರಾಣಿ ಗಂಗಮ್ಮಾಜಿ (1859).

ಶ್ರೀ ದೇವೇಶ್ವರ ಲಿಂಗ – ರಾಣಿ ದೇವಮ್ಮಾಜಿ (1859); ಶ್ರೀ ನಂಜೇಶ್ವರ ಲಿಂಗ – ರಾಣಿ ನಂಜಮ್ಮಾಜಿ; ಶ್ರೀ ಲಿಂಗೇಶ್ವರ ಲಿಂಗ – ರಾಜಕುಮಾರ ಲಿಂಗ ರಾಜೇಂದ್ರ ವಾಡಿಯರ್ (1835–1873).

1802ರಲ್ಲಿ ಜನಿಸಿದ ಚಿಕ್ಕವೀರ ರಾಜೇಂದ್ರ ವಾಡಿಯರ್ 1859ರಲ್ಲಿ ಲಂಡನ್‌ನಲ್ಲಿ ಮೃತಪಟ್ಟರು. ರಾಜನ ಪಾರ್ಥಿವ ಶರೀರವನ್ನು 1862ರಲ್ಲಿ ಕಾಶಿ ಜಂಗಮವಾಡಿ ಮಠಕ್ಕೆ ತಂದು 1862ರ ಫೆಬ್ರುವರಿ 12ರಂದು ವೀರಶೈವ ವಿಧಿವಿಧಾನದ ಪ್ರಕಾರ ಅಂತ್ಯಸಂಸ್ಕಾರ ಮಾಡಲಾಯಿತು. ಹಾಲೇರಿ ವಂಶಸ್ಥರು ತಮ್ಮ ಕೊನೆಯ ಉಸಿರಿನ ತನಕ ಕಾಶಿ ಪೀಠದ ಜಂಗಮವಾಡಿ ಮಠದ ಅನುಯಾಯಿಗಳಾಗಿ ಉಳಿಯುತ್ತಾರೆ.

ಈ ಜ್ಞಾನಪೀಠದ ಕಲಿಯುಗದ ಆಚಾರ್ಯರೆಂದೇ ಹೆಸರಾದ ಜಗದ್ಗುರು ವಿಶ್ವಾರಾಧ್ಯ ಭಗವತ್ಪಾದರ ತರುವಾಯ ಅಧಿಕಾರಕ್ಕೆ ಬಂದ ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು ಪೀಠಾಧಿಕಾರಿಗಳಾಗಿದ್ದರೆಂದು ಈ ಪೀಠದ



ಮಠದ ಆವರಣ



ಹಿರಿಯರ ಸ್ಮರಣಾರ್ಥ ಪ್ರತಿಷ್ಠಾಪಿಸಿರುವ ಲಿಂಗಗಳು

## ಕನ್ನಡದ ಮಕ್ಕಳಿಗಾಗಿ ಗುರುಕುಲ

ಕನ್ನಡದ ಮಕ್ಕಳಿಗಾಗಿಯೇ ಇಲ್ಲಿ ಗುರುಕುಲ ನಡೆಸಲಾಗುತ್ತಿದೆ. ಮೂರು ವರ್ಷಗಳ ಹಿಂದೆ ನಡೆದ ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲದ ಶತಮಾನೋತ್ಸವ ಸಮಾರಂಭದಲ್ಲಿ 18 ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಭಾಷೆಗಳಲ್ಲಿ ಭಾಷಾಂತರಗೊಂಡ 'ಸಿದ್ಧಾಂತ ಶಿಖಾಮಣಿ' ಕೃತಿಗಳು ಬಿಡುಗಡೆಯಾಗಿದ್ದವು. ಸಿದ್ಧಾಂತ ಶಿಖಾಮಣಿ ಕೃತಿಯು ವೀರಶೈವ ಧರ್ಮದ ಧರ್ಮ ಗ್ರಂಥವಾಗಿದೆ.

ಶ್ರೀ ಜಗದ್ಗುರುಗಳ ವಂಶಾವಳಿಯಿಂದ ತಿಳಿದುಬರುತ್ತದೆ. ಇವರು ಸಜೀವ ಸಮಾಧಿಯನ್ನು ಹೊಂದಿದ ಕಾರಣ ಇವರಿಗೆ 'ಗಾದೀ ಸ್ವಾಮಿ' ಎಂಬ ಹೆಸರು ಬಂತು. ಇವರ ಈ ಸಜೀವ ಸಮಾಧಿಯೇ ಇಂದು ಜಂಗಮವಾಡಿ ಮಠದಲ್ಲಿ ಗದ್ದುಗೆಯಾಗಿ ಪೂಜೆಗೊಳ್ಳುತ್ತಿದೆ.

## ಐತಿಹಾಸಿಕ ದಾಖಲೆಗಳು

ಕಾಶಿ ಜಂಗಮವಾಡಿ ಮಠದಲ್ಲಿ ಪೌರಾಣಿಕ ದಾಖಲೆಗಳೊಂದಿಗೆ ಐತಿಹಾಸಿಕ ಶಾಸನಗಳೂ ಇವೆ. ಈ ಪೀಠದಲ್ಲಿರುವ ಅನೇಕ ದಾನಪತ್ರಗಳಲ್ಲಿ ಕಾಶಿ ಜಯನಂದದೇವನಿಂದ ಕೊಡಲ್ಪಟ್ಟ ದಾನಪತ್ರ ಅತಿ ಪ್ರಾಚೀನವಾದದ್ದು.

ಈ ಪೀಠ ಪರಂಪರೆಯಲ್ಲಿ 51ನೇ ಪೀಠಾಧಿಪತಿಗಳಾದ ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳ ಕಾಲದಲ್ಲಿ ಕಾಶಿಯ ರಾಜನಾಗಿದ್ದ ಜಯನಂದದೇವ ರಾಜನು ಕ್ರಿ.ಶ. 574ರಲ್ಲಿ ಭೂದಾನ ಮಾಡಿ, ದಾನಶಾಸನ ಬರೆದುಕೊಟ್ಟಿದ್ದಾನೆ. ಇಂದಿಗೆ 1449 ವರ್ಷಗಳಷ್ಟು ಪ್ರಾಚೀನವಾದ ಆ ದಾನಪತ್ರವು ಮಠದಲ್ಲಿ ಇಂದಿಗೂ ಸುರಕ್ಷಿತವಾಗಿದೆ.

ಕ್ರಿ.ಶ. 1530ರಿಂದ 1668ರವರೆಗೆ ಹುಮಾಯೂನ್, ಅಕ್ಬರ್, ಜಹಾಂಗೀರ್, ಷಹಜಹಾನ್, ಔರಂಗಜೇಬ ಮತ್ತು ಮಹಮದ್ ಷಾ ಬಾದಶಹರ 17 (ಫರ್ಮಾನ್) ಭೂದಾನ ಪತ್ರಗಳಿವೆ.

ಮೊಘಲರ ಔರಂಗಜೇಬನು ಕಾಶಿಯ ವಿಶ್ವನಾಥ ಮಂದಿರವನ್ನು ಧ್ವಂಸ ಮಾಡಿದರೂ, ಮಠಕ್ಕೆ ಭೂದಾನ ಮಾಡಿ ಶಾಸನವನ್ನು ಬರೆದುಕೊಟ್ಟಿದ್ದಾನೆ. ಆ ಶಾಸನದಲ್ಲಿ, ಮಠಕ್ಕೆ ಬಂದಾಗ ತನಗಾದ ಅನುಭವವನ್ನೆಲ್ಲ ಬರೆಯಿಸಿ ತಾನು ಹಸ್ತಾಕ್ಷರ ಮಾಡಿಕೊಟ್ಟಿದ್ದಾನೆ. ಆ ಶಾಸನವೂ ಮಠದಲ್ಲಿದೆ.

ಜಂಗಮವಾಡಿ ಮಠದ ಭವ್ಯ ಪರಂಪರೆಯಲ್ಲಿ ಇಲ್ಲಿಯವರೆಗೆ 84 ಜನ ಪೀಠಾಚಾರ್ಯರು ಆಗಿಹೋಗಿದ್ದಾರೆ. ಈ ಪೀಠದ 79ನೇ ಜಗದ್ಗುರುಗಳಾದ ಹರೀಶ್ವರ ಶಿವಾಚಾರ್ಯ (ಸಿದ್ಧಲಿಂಗ) ಸ್ವಾಮಿಗಳು ಕ್ರಿ.ಶ. 1825ರಿಂದ 1879ರವರೆಗೆ, ಅಂದರೆ 54 ವರ್ಷ ಪೀಠಾಧಿಪತಿಗಳಾಗಿದ್ದರು. ಆಗ ಮೈಸೂರಿನ ಮಹಾರಾಜ ಕೃಷ್ಣರಾಜ ಒಡೆಯರ್ ಶ್ರೀ ಜಗದ್ಗುರು ಹರೀಶ್ವರ ಶಿವಾಚಾರ್ಯ ಮಹಾಸ್ವಾಮಿಗಳನ್ನು ಬರಮಾಡಿಕೊಂಡು ಪ್ರತಿದಿವಸ ಕಾಶಿಯಲ್ಲಿ 12 ಜನ ಮಾಹೇಶ್ವರರಿಗೆ ಪ್ರಸಾದ ವ್ಯವಸ್ಥೆಯನ್ನು ನಿರಂತರವಾಗಿ ಮಾಡಬೇಕು ಎಂದು ನಿವೇದಿಸಿಕೊಂಡು, ಪ್ರತಿವರ್ಷ ಆರು ನೂರು ರೂಪಾಯಿಗಳನ್ನು ತಮ್ಮ ವರ್ಧಂತಿಯ ದಿವಸ ಹುಂಡಿ ಮುಖಾಂತರವಾಗಿ ಕಳಿಸುವುದಾಗಿ 10.7.1846ರಂದು ಒಂದು ತಾಮ್ರಪತ್ರವನ್ನು ಬರೆದುಕೊಟ್ಟಿದ್ದಾರೆ.

## ಅಮೂಲ್ಯ ಗ್ರಂಥಾಲಯ

ಈ ಪೀಠದ 84ನೆಯ ಪೀಠಾಧಿಪತಿಗಳಾಗಿದ್ದ ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳು ಬಹುಭಾಷಾ ಪಂಡಿತರು. ಹಲವಾರು ಕೃತಿಗಳನ್ನು ರಚಿಸಿದ್ದರು. ಅವರು 1946ರಲ್ಲಿ ಜ್ಞಾನಮಂದಿರವೆಂಬ ಭವ್ಯ ಗ್ರಂಥಾಲಯ ಕಟ್ಟಿಸಿದ್ದರು. ಕಾಶಿ ಪೀಠದ ಈ ಜ್ಞಾನಮಂದಿರದಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಮುದ್ರಿತ ಗ್ರಂಥಗಳು ಹಾಗೂ ಸಾವಿರಾರು ತಾಡೋಲೆ ಗ್ರಂಥಗಳಿವೆ. ಇದರಿಂದ ಈ ಗ್ರಂಥಾಲಯ ಕಾಶಿಯಲ್ಲಿಯೇ ಅಮೂಲ್ಯ ಗ್ರಂಥಾಲಯವಾಗಿದೆ.

1989ರಲ್ಲಿ ಶ್ರೀ 1008 ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಕಾಶಿ ಮಹಾಪೀಠದ 86ನೇ ಜಗದ್ಗುರುಗಳಾಗಿ ಅಧಿಕಾರ ವಹಿಸಿಕೊಂಡರು. 'ಶ್ರೀ ಸಿದ್ಧಾಂತ ಶಿಖಾಮಣಿ ಪ್ರವಚನ ಪ್ರಭೆ' ಎಂಬ ನೂರೊಂದು ಸ್ಥಲಗಳ ಎರಡು ಸಂಪುಟದ ಗ್ರಂಥ ಸೇರಿದಂತೆ ಹಲವಾರು ಗ್ರಂಥಗಳನ್ನು ಅವರು ರಚಿಸಿದ್ದಾರೆ.

ಕಾಶಿ ಜಂಗಮವಾಡಿ ಮಠದಲ್ಲಿ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರ ಪವಿತ್ರ ಸ್ಮೃತಿಯಲ್ಲಿ ಅನ್ನಛತ್ರವನ್ನು 1990ರಲ್ಲಿ ಪ್ರಾರಂಭಿಸಲಾಯಿತು. ಯಾತ್ರೆಗಾಗಿ ಬಂದ ಭಕ್ತಾದಿಗಳಿಗೆ ಮಹಾಪೀಠದಲ್ಲಿ ವಸತಿ ಜೊತೆಗೆ ಉಚಿತ ಪ್ರಸಾದ ವ್ಯವಸ್ಥೆಯನ್ನೂ ಮಾಡಲಾಗುತ್ತಿದೆ. ವಿದ್ವತ್ ಪುರಸ್ಕಾರಗಳನ್ನು ಸಹ ಕಾಶಿಪೀಠದಿಂದ ಕೊಡಲಾಗುತ್ತಿದೆ.

ಪ್ರತಿಕ್ರಿಯಿಸಿ: feedback@sudha.co.in